**ಅಸಲು ದಾವಾ ನಂ:91/2014**
**ಪಿ.ಡಬ್ಲ್ಯೂ: 01**

**ದಿನಾಂಕ:08-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ ಎಸ್., ಪ್ರತಿವಾದಿಗಳ ಪರ ವಕೀಲರಿಂದ**

ನಾನು ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ. ಗಂಗಪ್ಪ, ಭೀಮಪ್ಪ, ಕೊಲ್ಲಾರಪ್ಪ, ಶಿವಣ್ಣರವರ ವಿರುದ್ದ ಹೂಡಿರುತ್ತೇನೆ. ನಾನು ಒಬ್ಬನೇ ಈ ದಾವೆ ಹೂಡಿರುತ್ತೇನೆ. ನನ್ನನ್ನು ಹೊರತುಪಡಿಸಿ ದಾವೆಯಲ್ಲಿನ ಸಂಗತಿಗಳು ಗಂಗಪ್ಪ, ಭೀಮಪ್ಪ, ಕೊಲ್ಲಾರಪ್ಪ, ಶಿವಣ್ಣರವರಿಗೆ ತಿಳಿದಿರುತ್ತದೆ. ಗಂಗಪ್ಪ, ಕೊಲ್ಲಾರಪ್ಪ ಮತ್ತು ಶಿವಣ್ಣನ ತಂದೆಯ ಹೆಸರು ಕಟ್ಟೆ ಔಲ್ಲಪ್ಪ.

2. ನಾವೆಲ್ಲರು ಹಿರಿಯೂರು ತಾಲ್ಲೂಕು ಐಮಂಗಲ ಹೋಬಳಿ ಬುರುಜನರೊಪ್ಪದಲ್ಲಿ ವಾಸ ಇರುತ್ತೇವೆ. ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನಾಗಲೀ, ನನ್ನ ಪೂರ್ವಿಕರಾಗಲೀ ರಾಮಜೋಗಿಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ಪಡಿತರ ಚೀಟಿ, ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನಾಗಲೀ, ನನ್ನ ಪೂರ್ವಿಕರಾಗಲೀ ಮೂಲವಾಸ ಬುರುಜನರೊಪ್ಪ ಆಗಿದ್ದು, ರಾಮಜೋಗಿಹಳ್ಳಿಯಲ್ಲಿ ಎಂದಿಗೂ ವಾಸ ಇಲ್ಲ ಎಂದರೆ ಸರಿಯಲ್ಲ.

3. ನಿಪಿ:35 ನ್ನು ತಾಲ್ಲೂಕು ಕಚೇರಿಯಿಂದ ಪಡೆದು ವಕೀಲರಿಗೆ ನೀಡಿರುತ್ತೇನೆ. ನಿಪಿ:35 ಬರೆದಿರುವ ಛಾಪಾ ಕಾಗದವನ್ನು ತಾಲ್ಲೂಕು ಕಚೇರಿಯಲ್ಲಿ ನಾನೇ ಖರೀದಿ ಮಾಡಿರುತ್ತೇನೆ. ನಿಪಿ:35 ನ್ನು ಪಡೆಯಲು ಮಾಹಿತಿಯನ್ನು ರಾಮಜೋಗಿಹಳ್ಳಿಯ ರಾಜಸ್ವ ನಿರೀಕ್ಷಕರಿಂದ ಪಡೆದುಕೊಂಡಿರುತ್ತೇನೆ. ಸದರಿಯವರ ಹೆಸರು ನೆನಪಿಲ್ಲ. ನಿಪಿ:35 ನ್ನು ಪಡೆಯಲು ತಾಲ್ಲೂಕು ಕಚೇರಿಯವರು ಪಡಿತರ ಚೀಟಿ, ಆಧಾರ ಕಾರ್ಡ, ಮರಣ ಪ್ರಮಾಣಪತ್ರವನ್ನು ಕೇಳಿರುತ್ತಾರೆ ಮತ್ತು ನೀಡಿರುತ್ತೇನೆ. ಸಲ್ಲಿಸಿದ ದಾಖಲೆಗಳಲ್ಲಿ ವಾಸವನ್ನು ಬುರುಜನರೊಪ್ಪ ಎಂದು ನಮೂದಾಗಿರುತ್ತದೆ. ನಿಪಿ:35 ನ್ನು ಪಡೆಯಲು ರಾಮಚಂದ್ರಪ್ಪ ಬಿನ್ ತಿಪ್ಪಯ್ಯ, ಯಲ್ಲಪ್ಪ ಬಿನ್ ತಿಪ್ಪಯ್ಯ, ತಿಪ್ಪೇಸ್ವಾಮಿ ಬಿನ್ ರಾಮಚಂದ್ರಪ್ಪ, ಗಂಗಪ್ಪ ಬಿನ್ ಯಲ್ಲಪ್ಪ, ಯಲ್ಲಪ್ಪ ಬಿನ್ ರಾಮಚಂದ್ರಪ್ಪ, ಕೆಂಚಪ್ಪ ಬಿನ್ ಗಂಗಪ್ಪರವರುಗಳು ಮರಣ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಈಗ ತಿಳಿಸಿದ ವ್ಯಕ್ತಿಗಳ ಪೌತಿಯಾದ ನಿಖರವಾದ ವರ್ಷ, ದಿನಾಂಕ, ತಿಂಗಳು ನನಗೆ ಗೊತ್ತಿಲ್ಲ. ಆದರೆ ರಾಮಚಂದ್ರಪ್ಪ ಬಿನ್ ತಿಪ್ಪಯ್ಯ, ತಿಪ್ಪೇಸ್ವಾಮಿ ಬಿನ್ ರಾಮಚಂದ್ರಪ್ಪ ಮತ್ತು ಯಲ್ಲಪ್ಪ

ಬಿನ್ ರಾಮಚಂದ್ರಪ್ಪ ಬುರುಜನರೊಪ್ಪದಲ್ಲಿ ಪೌತಿಯಾಗಿರುತ್ತಾರೆ. ಯಲ್ಲಪ್ಪ ಬಿನ್ ತಿಪ್ಪಯ್ಯ, ಗಂಗಪ್ಪ ಬಿನ್ ಯಲ್ಲಪ್ಪ ಕೆನ್ನಡಲು ಗ್ರಾಮದಲ್ಲಿ ಪೌತಿಯಾಗಿರುತ್ತಾರೆ. ಕೆಂಚಪ್ಪ ಬಿನ್ ಗಂಗಪ್ಪರವರು ಬೊಮ್ಮೆನಹಳ್ಳಿಯಲ್ಲಿ ಪೌತಿಯಾಗಿರುತ್ತಾರೆ. ಈಗ ತಿಳಿಸಿದ ವ್ಯಕ್ತಿಗಳ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇಲ್ಲ.

4. ನಿಪಿಃ35 ರಲ್ಲಿ ಮೂಲಪುರುಷ ಗಂಗ ಮತ್ತು ಸದರಿಯವರ ಪತ್ನಿ ಬಸವ್ವ ಪೌತಿಯಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಸದರಿ ಗಂಗ ಮತ್ತು ಬಸವ್ವರವರ ಪಡಿತರ ಚೀಟಿ, ಆಧಾರ ಕಾರ್ಡ, ಮರಣ ಪ್ರಮಾಣಪತ್ರ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಆಗಲೀ ಅಥವಾ ನಿಪಿಃ35 ನ್ನು ಪಡೆಯಲು ತಾಲ್ಲೂಕು ಕಚೇರಿಗೆ ಸಲ್ಲಿಸಿಲ್ಲ. ಮೂಲಪುರುಷ ಗಂಗರವರ ಮೊದಲನೆ ಮಗ ಎಂದು ತೋರಿಸಿರುವ ತಿಪ್ಪಗಾರವರ ಹೆಂಡತಿಯ ಹೆಸರು ಓಬವ್ವ. ನಿಪಿಃ35 ರಲ್ಲಿರುವ ತಿಪ್ಪಗಾ, ಓಬವ್ವ ಮತ್ತು ಬುಡ್ಡಜ್ಜಿ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಆಗಲೀ ಅಥವಾ ನಿಪಿಃ35 ನ್ನು ಪಡೆಯಲು ತಾಲ್ಲೂಕು ಕಚೇರಿಗೆ ಸಲ್ಲಿಸಿಲ್ಲ.ತಿಪ್ಪಗಾ, ಓಬವ್ವ ಮತ್ತು ಬುಡ್ಡಜ್ಜಿ ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ.

5. ನಿಪಿಃ35 ರಲ್ಲಿ ತೋರಿಸಿರುವ ತಿಪ್ಪಗಾರವರ ವಂಶಸ್ಥರಾದ ಯಲ್ಲಪ್ಪ ಮತ್ತು ಅವರ ಹೆಂಡತಿ ಲಕ್ಷ್ಮಮ್ಮರವರ ಆಧಾರ ಕಾರ್ಡ, ಮರಣ ಪ್ರಮಾಣಪತ್ರ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಆಗಲೀ ಅಥವಾ ನಿಪಿಃ35 ನ್ನು ಪಡೆಯಲು ತಾಲ್ಲೂಕು ಕಚೇರಿಗೆ ಸಲ್ಲಿಸಿಲ್ಲ. ಬುಡ್ಡಜ್ಜಿರವರ ಮಗ ರಾಮಚಂದ್ರಪ್ಪ ಮತ್ತು ಮತ್ತು ಅವರ ಹೆಂಡತಿ ಸಿದ್ದಮ್ಮರವರ ಆಧಾರ ಕಾರ್ಡ, ಮರಣ ಪ್ರಮಾಣಪತ್ರ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಆಗಲೀ ಅಥವಾ ನಿಪಿಃ35 ನ್ನು ಪಡೆಯಲು ತಾಲ್ಲೂಕು ಕಚೇರಿಗೆ ಸಲ್ಲಿಸಿಲ್ಲ. ರಾಮಚಂದ್ರಪ್ಪ ಮತ್ತು ಅವರ ಹೆಂಡತಿ ಸಿದ್ದಮ್ಮರವರು ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ.

6. ವಂಶವೃಕ್ಷವನ್ನು ಪಡೆಯಲು ಕೆಲವು ಮಾರ್ಗಸೂಚಿಗಳು ಇರುತ್ತವೆ ಎಂದರೆ ಸರಿ. ಮಾರ್ಗಸೂಚಿಗಳನ್ನು ಪಾಲಿಸದೇ ನಿಪಿಃ.35 ನ್ನು ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಿಪಿಃ35 ನ್ನು ಪಡೆಯಲು ನನ್ನ, ಯಲ್ಲಪ್ಪ ಬಿನ್ ರಾಮಚಂದ್ರಪ್ಪ, ತಿಪ್ಪೇಸ್ವಾಮಿ ಬಿನ್ ರಾಮಚಂದ್ರಪ್ಪ, ಯಲ್ಲಪ್ಪ ಬಿನ್ ಗಂಗಪ್ಪ, ಕೊಲ್ಲಪ್ಪ ಬಿನ್ ಯಲ್ಲಪ್ಪ, ಪರಸಪ್ಪ ಬಿನ್

ಯಲ್ಲಪ್ಪರವರ ಪಡಿತರ ಚೀಟಿ, ಆಧಾರ ಕಾರ್ಡ ಮತ್ತು ತಿಪ್ಪೇಸ್ವಾಮಿ, ಗಂಗಪ್ಪ, ಯಲ್ಲಪ್ಪ, ಕೆಂಚಪ್ಪರವರ ಮರಣ ಪ್ರಮಾಣಪತ್ರವನ್ನು ನಿಪಿಃ35 ಕ್ಕೆ ದಾಖಲೆ ಪಡೆಯಲು ತಾಲ್ಲೂಕು ಕಚೇರಿಗೆ ಸಲ್ಲಿಸಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ35 ರ ವಂಶವೃಕ್ಷವನ್ನು ಪಡೆಯಲು ಸಲ್ಲಿಸಿದ ದಾಖಲೆಗಳನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

7. ನಿಪಿಃ36 ರಲ್ಲಿ ಜಯಣ್ಣ ಸುಮಾರು 35 ವರ್ಷ ನಂತರದ ಕಾಲಂನಲ್ಲಿ ಬರೆದಿರುವ ಸಂಖ್ಯೆ ಯಾವ ವಿಷಯಕ್ಕೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ದಾಖಲೆ ನೋಡಿ ನನಗೆ ಓದಲು ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಂಬರನ್ನು ಪ್ರತಿವಾದಿ ಪರ ವಕೀಲರು ಓದಿ ತಿಳಿಸಿದಾಗ ಸಾಕ್ಷಿಯು ಸದರಿ ನಂಬರ ಆಧಾರ ಗುರುತಿನ ಚೀಟಿಯ ನಂಬರ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಸಾಕ್ಷಿಯ ಆಧಾರ ಗುರುತಿನ ಚೀಟಿ ಪ್ರತಿಯಾಗಿದ್ದು ಸದರಿ ದಾಖಲೆಯಲ್ಲಿ ಸಾಕ್ಷಿಯ ಆಧಾರ ನಂಬರಃ 3932 9788 0471 ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ನಿಡಿಃ1 ಎಂದು ಗುರುತಿಸಲಾಯಿತು. ನಿಪಿಃ36 ರ ದಾಖಲೆಯಲ್ಲಿ ತಿಪ್ಪೇಸ್ವಾಮಿಯವರ ಯಾವುದೇ ದಾಖಲೆ ನೀಡಿಲ್ಲ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ದಾಖಲೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

8. ನಿಪಿಃ36 ರಲ್ಲಿ ಯಲ್ಲಪ್ಪರವರ ಹೆಸರಿನ ಮುಂದಿರುವ ಸಂಖ್ಯೆಯನ್ನು ಪ್ರತಿವಾದಿ ಪರ ವಕೀಲರು ಓದಿ ಹೇಳಲಾಗಿ ಸಾಕ್ಷಿಯು ಸದರಿ ಸಂಖ್ಯೆ ಯಲ್ಲಪ್ಪರವರ ಆಧಾರ ಸಂಖ್ಯೆ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಯಲ್ಲಪ್ಪ ಬಿನ್ ರಾಮಚಂದ್ರಪ್ಪರವರ ಆಧಾರ ಗುರುತಿನ ಚೀಟಿ ಪ್ರತಿಯಾಗಿದ್ದು ಸದರಿ ದಾಖಲೆಯಲ್ಲಿ ಆಧಾರ ನಂಬರಃ 3251 7183 5128 ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ನಿಡಿಃ2 ಎಂದು ಗುರುತಿಸಲಾಯಿತು.

9. ನಿಪಿಃ36 ರಲ್ಲಿ ಗಂಗಪ್ಪ ಹೆಸರಿನ ಮುಂದಿರುವ ಸಂಖ್ಯೆಯನ್ನು ಪ್ರತಿವಾದಿ ಪರ ವಕೀಲರು ಓದಿ ಹೇಳಲಾಗಿ ಸಾಕ್ಷಿಯು ಸದರಿ ಸಂಖ್ಯೆ ಗಂಗಪ್ಪ ಆಧಾರ ಸಂಖ್ಯೆ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಗಂಗಪ್ಪ C/o ಯಲ್ಲಪ್ಪರವರ ಆಧಾರ ಗುರುತಿನ ಚೀಟಿ ಪ್ರತಿಯಾಗಿದ್ದು ಸದರಿ ದಾಖಲೆಯಲ್ಲಿ ಆಧಾರ ನಂಬರಃ

8153 3453 3621 ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ನಿಡಿಃ3 ಎಂದು ಗುರುತಿಸಲಾಯಿತು.

10. ನಿಪಿಃ36 ರಲ್ಲಿ ಕೊಲ್ಲಾರಪ್ಪ ಹೆಸರಿನ ಮುಂದಿರುವ ಸಂಖ್ಯೆಯನ್ನು ಪ್ರತಿವಾದಿ ಪರ ವಕೀಲರು ಓದಿ ಹೇಳಲಾಗಿ ಸಾಕ್ಷಿಯು ಸದರಿ ಸಂಖ್ಯೆ ಕೊಲ್ಲಾರಪ್ಪ ಆಧಾರ ಸಂಖ್ಯೆ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಕೊಲ್ಲಯ್ಯರವರ ಆಧಾರ ಗುರುತಿನ ಚೀಟಿ ಪ್ರತಿಯಾಗಿದ್ದು ಸದರಿ ದಾಖಲೆಯಲ್ಲಿ ಆಧಾರ ನಂಬರಃ 5060 5005 9024 ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ನಿಡಿಃ4 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಕೊಲ್ಲಾರಪ್ಪ ಮತ್ತು ಕೊಲ್ಲಯ್ಯ ಒಬ್ಬರೇ ಎಂದು ನುಡಿಯುತ್ತಾರೆ.

11. ನಿಪಿಃ36 ರಲ್ಲಿ ಪರಸಪ್ಪ ಹೆಸರಿನ ಮುಂದಿರುವ ಸಂಖ್ಯೆಯನ್ನು ಪ್ರತಿವಾದಿ ಪರ ವಕೀಲರು ಓದಿ ಹೇಳಲಾಗಿ ಸಾಕ್ಷಿಯು ಸದರಿ ಸಂಖ್ಯೆ ಪರಸಪ್ಪರವರ ಆಧಾರ ಸಂಖ್ಯೆ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಪರಸಪ್ಪರವರ ಆಧಾರ ಗುರುತಿನ ಚೀಟಿ ಪ್ರತಿಯಾಗಿದ್ದು ಸದರಿ ದಾಖಲೆಯಲ್ಲಿ ಆಧಾರ ನಂಬರಃ 7173 9974 6223 ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ನಿಡಿಃ5 ಎಂದು ಗುರುತಿಸಲಾಯಿತು. ನಿಪಿಃ36 ರಲ್ಲಿ ಮತ್ತು ನಿಡಿಃ1 ರಿಂದ ನಿಡಿಃ5 ರಲ್ಲಿ ನಮೂದಿಸಿರುವ ವ್ಯಕ್ತಿಗಳ ಗುರುತಿನ ಸಂಖ್ಯೆಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿಃ36 ರ ದಾಖಲೆಯಲ್ಲಿ ಜಯಣ್ಣ, ತಿಪ್ಪೇಸ್ವಾಮಿ, ಕೊಲ್ಲಾರಪ್ಪ, ಯಲ್ಲಪ್ಪ, ಗಂಗಪ್ಪ, ಪರಸಪ್ಪರವರ ತಂದೆಯ ಹೆಸರು ನಮೂದು ಇಲ್ಲ ಎಂದರೆ ಸರಿ.

12. ಜಯಣ್ಣ, ತಿಪ್ಪೇಸ್ವಾಮಿ, ಗಂಗಪ್ಪ, ವಾಸ ಬುರುಜನರೊಪ್ಪ. ಯಲ್ಲಪ್ಪ, ಪರಶುರಾಮಪ್ಪ ಮತ್ತು ಕೊಲ್ಲಯ್ಯರವರ ವಾಸ ಕೆನ್ನಡಲು ಎಂದು ನಿಡಿಃ1 ರಿಂದ ನಿಡಿಃ5 ರಲ್ಲಿ ತಮ್ಮಗಳ ಆಧಾರ ಚೀಟಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.